Akashvani : Bangalore
National Bulletin In Kannada
11.03.2025 / 19.35 hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

- ದೇಶಕ್ಕೆ ಕಲ್ಲಿದ್ದಲು ಆಮದು ಪ್ರಮಾಣದಲ್ಲಿ ಕಡಿತ; ಸುಮಾರು ೪೨ ಸಾವಿರದ ೩೦೦ ಕೋಟಿ ರೂಪಾಯಿ ಉಳಿತಾಯ - ಕೇಂದ್ರ ಸರ್ಕಾರ ಮಾಹಿತಿ
- ’ಉಜಾಲಾ ಯೋಜನೆ’ಯಡಿ ದೇಶಾದ್ಯಂತ ಈವರೆಗೆ ೩೬ ಕೋಟಿ ಎಲ್‌ಇಡಿ ಬಲ್ಬ್‌ಗಳ ವಿತರಣೆ
- ಪಾಕಿಸ್ತಾನದಲ್ಲಿ ಭಯೋತ್ಪಾದಕರಿಂದ ರೈಲು ಅಪಹರಣ; ಕನಿಷ್ಠ ೬ ಸೇನಾ ಸಿಬ್ಬಂದಿ ಸಾವು, ಒತ್ತೆಯಾಳುಗಳಾಗಿ ವಶದಲ್ಲಿರುವ ೪೫೦ ಕ್ಕೂ ಹೆಚ್ಚು ಪ್ರಯಾಣಿಕರು
- ನವದೆಹಲಿಯಲ್ಲಿಂದು ಭಾರತದ ಮೊಟ್ಟಮೊದಲ ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್‌ಪ್ರಿಕ್ಸ್‌ಗೆ ಚಾಲನೆ
- ಡಬ್ಲ್ಯೂಪಿಎಲ್ ಟಿ-೨೦ ಕ್ರಿಕೆಟ್; ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಫೀಲ್ಡಿಂಗ್ ಆಯ್ಕೆ

<><*<><>*><>

೨೦೨೪ರ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ದೇಶಕ್ಕೆ ಆಮದು ಮಾಡಿಕೊಳ್ಳಲಾದ ಕಲ್ಲಿದ್ದಲು ಪ್ರಮಾಣ ಶೇಕಡ ೮.೪ ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಈ ಕುರಿತಂತೆ ಹೇಳಿಕೆ ಬಿಡುಗಡೆಗೊಳಿಸಿರುವ ಕೇಂದ್ರ ಕಲ್ಲಿದ್ದಲು ಸಚಿವಾಲಯ, ೨೦೨೪ರ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ೧೮೦.೪೨ ದಶಲಕ್ಷ ಟನ್ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗಿದ್ದು, ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ೨೦೦.೧೯ ದಶಲಕ್ಷ ಟನ್ ಕಲ್ಲಿದ್ದಲು ಆಮದು ಮಾಡಿಕೊಳ್ಳಲಾಗಿತ್ತು. ಈ ಕಡಿತದಿಂದ ಸುಮಾರು ೪೨ ಸಾವಿರದ ೩೦೦ ಕೋಟಿ ರೂಪಾಯಿ ವಿದೇಶಿ ವಿನಿಮಯ ಉಳಿತಾಯಕ್ಕೆ ಕಾರಣವಾಗಿದೆ.

<><*<><>*><>

ಕೇಂದ್ರ ಸರ್ಕಾರ ’ಉಜಾಲಾ ಯೋಜನೆ’ಯಡಿ ದೇಶಾದ್ಯಂತ ಈವರೆಗೆ ಸುಮಾರು ೩೬ ಕೋಟಿ ಎಲ್‌ಇಡಿ ಬಲ್ಬ್‌ಗಳನ್ನು ವಿತರಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ. ರಾಜ್ಯಸಭೆಯಲ್ಲಿಂದು ಲಿಖಿತ ಉತ್ತರ ನೀಡಿದ ಕೇಂದ್ರ ಇಂಧನ ಸಚಿವ ಮನೋಹರ್ ಲಾಲ್ ಖಟ್ಟರ್, ಈ ಯೋಜನೆಯಿಂದಾಗಿ ಪ್ರತಿವರ್ಷಕ್ಕೆ ಗಂಟೆಗೆ ೪೮ ಶತಕೋಟಿ ಕಿಲೋವ್ಯಾಟ್ ಶಕ್ತಿ ಉಳಿಕೆ ಮಾಡಲಾಗಿದೆ. ಎಲ್‌ಇಡಿ ಉತ್ಪನ್ನಗಳು ಅತ್ಯಲ್ಪ ವಿಷಕಾರಿ ವಸ್ತುಗಳನ್ನು ಹೊಂದಿರುತ್ತವೆ. ಹಾಗಾಗಿ ಇವುಗಳನ್ನು ವಿಲೇವಾರಿ ಮಾಡುವುದು ಸುಲಭವಾಗಿದ್ದು, ಪರಿಸರ ಮಾಲಿನ್ಯ ತಡೆಗೂ ಕೊಡುಗೆ ನೀಡುತ್ತವೆ.

<><*<><>*><>

ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ವೈದ್ಯರ ಹಾಗೂ ಸಂಶೋಧಕರ ಪಾತ್ರ ಪ್ರಮುಖವಾಗಿರುತ್ತದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ. ಪಂಜಾಬ್ ಭಟಿಂಡಾದ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ_ ಎಮ್ಸ್‌ನ ಮೊದಲನೇ ಘಟಿಕೋತ್ಸವವನ್ನುದ್ದೇಶಿಸಿ ಮಾತನಾಡಿದ ಅವರು, ಆರೋಗ್ಯಕರ ಜೀವನ ಶೈಲಿ ಮತ್ತು ಉತ್ತಮ ಕೃಷಿ ವಿಧಾನಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸಲು ಕೃಷಿ ಹಾಗೂ ಪರಿಸರ ತಜ್ಞರೊಂದಿಗೆ ಸಮಾಲೋಚಿಸಿ

ಸಂಶೋಧನೆ ನಡೆಸುವಂತೆ ಏಮ್ಸ್ ವೈದ್ಯರಿಗೆ ಕರೆ ನೀಡಿದರು. ಮಾದಕ ವ್ಯಸನದಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ತೊಂದರೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದು ರಾಷ್ಟ್ರಪತಿ ಅವರು, ಈ ಕುರಿತಂತೆ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳ ಸಹಯೋಗದೊಂದಿಗೆ ಸಾರ್ವಜನಿಕರ ಜಾಗೃತಿ ಅಭಿಯಾನ ನಡೆಸಲು ಸಲಹೆ ನೀಡಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ನಾಳೆ ಪಂಜಾಬ್‌ನ ಚಂಡೀಗಢದಲ್ಲಿರುವ ಪಂಜಾಬ್ ವಿಶ್ವವಿದ್ಯಾಲಯದ ೭೨ನೇ ಘಟಿಕೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಈ ವೇಳೆ ಅವರು, ವಿದ್ಯಾರ್ಥಿಗಳಿಗೆ ಪದವಿ ಹಾಗೂ ಪದಕಗಳನ್ನು ಪ್ರದಾನ ಮಾಡಲಿದ್ದು, ಬಳಿಕ ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ. ರಾಷ್ಟ್ರಪತಿಗಳ ಭೇಟಿಗಾಗಿ ವಿಶ್ವವಿದ್ಯಾಲಯದ ಕ್ಯಾಂಪಸ್ ಹಾಗೂ ಸುತ್ತಮುತ್ತಲು ಬಿಗಿಬಂದೋಬಸ್ತ್ ಮಾಡಲಾಗಿದೆ.

<><*<><>*><>

ಮಾರಿಷಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಇಂದು ಪಾಂಪ್ಲೆಮೌಸ್‌ನಲ್ಲಿರುವ ಸರ್ ಸೀವೂಸಗೂರ್ ರಾಮಗೂಲಂ ಉದ್ಯನವನದಲ್ಲಿ ಮಾರಿಷಸ್‌ನ ಮಾಜಿ ಅಧ್ಯಕ್ಷ ಸರ್ ಅನೆರೂಡ್ ಜುಗ್ನೌತ್ ಹಾಗೂ ಮಾಜಿ ಪ್ರಧಾನಿ ಸೀವೂಸಗೂರ್ ರಾಮಗೂಲಂ ಅವರಿಗೆ ಗೌರವ ನಮನ ಸಲ್ಲಿಸಿದರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ಮಾರಿಷಸ್ ಪ್ರಗತಿಯಲ್ಲಿ ಹಾಗೂ ಭಾರತ- ಮಾರಿಷಸ್ ನಡುವಿನ ಬಾಂಧವ್ಯಕ್ಕೆ ದೃಢವಾದ ಅಡಿಪಯ ನಿರ್ಮಿಸಿವಲ್ಲಿ ಉಭಯ ನಾಯಕರು ನೀಡಿದಂತಹ ಕೊಡುಗೆಯನ್ನು ಸ್ಮರಿಸಿದ್ದಾರೆ. ಗೌರವ ನಮನದ ಬಳಿಕ ಪ್ರಧಾನಿ ನರೇಂದ್ರ ಮೋದಿ ಹಾಗೂ ಮಾರಿಷಸ್ ಪ್ರಧಾನಿ ಡಾ.ನವೀನ್‌ಚಂದ್ರ ರಾಮಗೂಲಂ 'ಏಕ್ ಪೇಡ್ ಮಾ ಕೆ ನಾಮ್' ಉಪಕ್ರಮದಡಿ ಇದೇ ಉದ್ಯಾನವನದಲ್ಲಿ ಒಂದು ಸಸಿ ನೆಟ್ಟರು.

<><*<><>*><>

ಗಡಿಯಾಚೆಗಿನ ಕಳ್ಳಸಾಗಣೆಯನ್ನು ತಡೆಯಲು ಗಡಿಭದ್ರತಾ ಪಡೆಗಳು ಭಾರತ-ಬಾಂಗ್ಲಾ ದೇಶಗಳ ಗಡಿಯಲ್ಲಿ ನಿರಂತರ ೨೪ ಗಂಟೆಯೂ ಕಾವಲು ಕಾಯುತ್ತಿದ್ದಾರೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಹೇಳಿದ್ದಾರೆ. ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ ಅವರು, ಬಿಎಸ್‌ಎಫ್ ಕಳೆದ ಹತ್ತು ವರ್ಷಗಳಲ್ಲಿ ೨ ಸಾವಿರದ ೮೦೬ ಕೋಟಿ  ರೂಪಾಯಿ ಅಕ್ರಮ ವಸ್ತುಗಳನ್ನು ವಶಪಡಿಸಿಕೊಂಡಿವೆ.  ಭಾರತ-ಬಾಂಗ್ಲಾದೇಶ ಗಡಿಯಲ್ಲಿ ಕಳ್ಳಸಾಗಣೆ ಚಟುವಟಿಕೆಗಳನ್ನು ತಡೆಯಲು ಬಿಎಸ್‌ಎಫ್ ಬಹುಮುಖಿ ವಿಧಾನವನ್ನು ಅಳವಡಿಸಿಕೊಂಡಿದೆ ಎಂದು ಹೇಳಿದೆ. ಗಡಿಗಳಲ್ಲಿ ಕಣ್ಗಾವಲು, ಸಿಬ್ಬಂದಿ ಸಂಖ್ಯೆಯಲ್ಲಿ ಹೆಚ್ಚಳ, ಬೇಲಿ ನಿರ್ಮಾಣ ಹಾಗೂ ರಾಜ್ಯ ಸರ್ಕಾರಗಳು ಮತ್ತು ಗುಪ್ತಚರ ಸಂಸ್ಥೆಗಳ ನಡುವಿನ ಸಮನ್ವಯನ್ನು ಮತ್ತಷ್ಟು ಬಲಪಡಿಸುವುದನ್ನು ಈ ವಿಧಾನ ಒಳಗೊಂಡಿದೆ.

<><*<><>*><>

ಲೋಕಸಭೆಯಲ್ಲಿಂದು ೨೦೨೪-೨೫ನೇ ಸಾಲಿನ ಅನುದಾನಗಳ ಹೆಚ್ಚುವರಿ ಬೇಡಿಕೆಗಳ ಎರಡನೇ ಹಂತದ ಚರ್ಚೆ ಜೊತೆಗೆ ಮಣಿಪುರ ಆಯ-ವ್ಯಯ ಕುರಿತ ಚರ್ಚೆ ಕೈಗೆತ್ತಿಕೊಳ್ಳಲಾಯಿತು.  ಹೆಚ್ಚುವರಿ ಅನುದಾನದ ಬೇಡಿಕೆಗಳ ಅಡಿಯಲ್ಲಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒಟ್ಟು ೫೧ ಸಾವಿರದ ೪೬೨ ಕೋಟಿ ರೂಪಾಯಿಗಳ ಹೆಚ್ಚುವರಿ ವ್ಯಯಕ್ಕಾಗಿ ಸದನದ ಅನುಮೋದನೆಗಾಗಿ ಪ್ರಸ್ತಾಪಿಸಲಾಯಿತು. ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್‌ನ ಗೌರವ್ ಗೊಗೊಯ್, ಪ್ರಸ್ತುತ ಭಾರತ ಹಾಗೂ ಅಮೆರಿಕ ನಡುವೆ ನಡೆಯುತ್ತಿರುವ ತೆರಿಗೆ ಮಾತುಕತೆಗಳ ಕುರಿತು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದರು.  ಇದೇ ವೇಳೆ ಅವರು, ಸರ್ಕಾರದ 'ಮೇಕ್ ಇನ್ ಇಂಡಿಯಾ' ಉಪಕ್ರಮದ ಕುರಿತಂತೆ ಪ್ರಶ್ನಿಸಿವುದರ ಜೊತೆಗೆ ದೇಶದ ಅಸಂಘಟಿತ ವಲಯದ ಕುರಿತು ಮಾತನಾಡಿದರು. ಬಳಿಕ ಮಾತನಾಡಿದ ಬಿಜೆಪಿ ಬಿಪ್ಲಬ್

ಕುಮಾರ್ ದೇಬ್, ಕೇಂದ್ರ ಸರ್ಕಾರ ಮಣಿಪುರದಲ್ಲಿ ಹಲವು ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತಂದಿದೆ. ಈಶಾನ್ಯ ಪ್ರದೇಶದ ಶೇಕಡ ೭೫ ಪ್ರದೇಶದಲ್ಲಿ ಶಸ್ತ್ರಾಸ್ತ್ರ ಪಡೆಗಳ ವಿಶೇಷ ಅಧಿಕಾರದ ಕಾಯ್ದೆಯನ್ನು ಸರ್ಕಾರ ರುದ್ದುಪಡಿಸಿದೆ ಎಂದು ತಿಳಿಸಿದರು. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಸಮಾಜವಾದಿ ಪಕ್ಷದ ಸಂಸದ ನೀರಜ್ ಮೌರ್ಯ ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದರು.

<><*<><>*><>

ರಾಜ್ಯಸಭೆಯಲ್ಲಿಂದು ಶಿಕ್ಷಣ ಸಚಿವಾಲಯದ ಕಾರ್ಯ ನಿರ್ವಹಣೆ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಯಿತು. ಚರ್ಚೆಯನ್ನು ಆರಂಭಿಸಿದ ಕಾಂಗ್ರೆಸ್‌ನ ದಿಗ್ವಿಜಯ್ ಸಿಂಗ್, ಶಿಕ್ಷಕರಲ್ಲಿ ಕೌಶಲ್ಯಾಭಿವೃದ್ಧಿ ಮತ್ತು ತರಬೇತಿ ಕುರಿತಂತೆ ಸಭೆಯ ಗಮನ ಸೆಳೆದರು. ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಜೂನಿಯರ್ ರಿಸರ್ಚ್ ಫೆಲೋಶಿಪ್ ನೀಡಲು ವಿಳಂಬವಾಗುತ್ತಿದೆ ಎಂದರು. ಇದೇ ವೇಳೆ ಅವರು, ಕೇಂದ್ರ ಸರ್ಕಾರ, ಸರ್ಕಾರಿ ವಿಶ್ವವಿದ್ಯಾಲಯಗಳಿಂದ ಜಿಎಸ್‌ಟಿ ತೆರಿಗೆ ಪಡೆಯುತ್ತಿದ್ದು, ಈ ರೂಢಿ ಹಿಂದೆಂದೂ ಇರಲಿಲ್ಲ ಎಂದು ಆರೋಪಿಸಿದ್ದಾರೆ. ಬಳಿಕ ಮಾತನಾಡಿದ ಬಿಜೆಪಿ ಸಂಸದ ಘನಶ್ಯಾಮ್ ತಿವಾರಿ, ದೇಶದ ಶಿಕ್ಷಣ ವ್ಯವಸ್ಥೆಯನ್ನು ಪರಿವರ್ತಿಸಲು ಸರ್ಕಾರ ಹಲವಾರು ಕ್ರಮಗಳನ್ನು ಕೈಗೊಂಡಿದೆ. ಸಮಗ್ರ ಶಿಕ್ಷಾ ಅಭಿಯಾನಕ್ಕಾಗಿ ೪೧ ಸಾವಿರ ಕೋಟಿ ರೂಪಾಯಿ ಮೀಸಲಿಡಲಾಗಿದೆ. ೧೪ ಸಾವಿರದ ೫೦೦ ಕ್ಕೂ ಹೆಚ್ಚು ಶಾಲೆಗಳನ್ನು ಆಧುನೀಕರಿಸಲಾಗಿದೆ ಎಂದರು. ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಟಿಎಂಸಿ ಸಂಸದೆ ರಿಟಬ್ರತಾ ಬ್ಯಾನರ್ಜಿ, ಕೇಂದ್ರ ಆಯ-ವ್ಯಯದಲ್ಲಿ ಶಿಕ್ಷಣಕ್ಕಾಗಿ ಮಾಡಲಾದ ವೆಚ್ಚ, ಜಿಡಿಪಿಯ ಶೇಕಡ ೦.೧೦೭ ರಷ್ಟಿದ್ದು, ಅದನ್ನು ಹೆಚ್ಚಿಸಬೇಕು ಎಂದರು. ಇದೇ ವೇಳೆ ಅವರು, ದೇಶದ ನಿರುದ್ಯೋಗ ಸಮಸ್ಯೆ ಬಗ್ಗೆಯೂ ಸದನದ ಗಮನ ಸೆಳೆದರು.

<><*<><>*><>

ಪಾಕಿಸ್ತಾನದಲ್ಲಿರುವ ಬಲುಚಿಸ್ತಾನದ ಮಾಚ್ ಪ್ರದೇಶದಲ್ಲಿಂದು ಪೇಶಾವರ್ ಕ್ವೆಟ್ಟಾ ಜಾಫರ್ ಎಕ್ಸ್‌ಪ್ರೆಸ್ ರೈಲನ್ನು ಭಯೋತ್ಪಾದಕರು ಅಪಹರಿಸಿದ್ದಾರೆ. ಈ ವೇಳೆ ಕನಿಷ್ಠ ೬ ಸೇನಾ ಸಿಬ್ಬಂದಿ ಸಾವನ್ನಪ್ಪಿದ್ದು, ೪೫೦ ಕ್ಕೂ ಹೆಚ್ಚು ಪ್ರಯಾಣಿಕರನ್ನು ಒತ್ತೆಯಾಳುಗಳನ್ನಾಗಿ ಇರಿಸಲಾಗಿದೆ. ಮಾಧ್ಯಮ ವರದಿಗಳ ಪ್ರಕಾರ ಬಲುಚಿಸ್ತಾನ್ ಸರ್ಕಾರದ ವಕ್ತಾರ ಶಾಹಿದ್ ರಿಂಡ್ ಈ ಕುರಿತು ಮಾಹಿತಿ ನೀಡಿದ್ದು, ಕ್ವೆತ್ತಾದಿಂದ ಪೇಶಾವರ್‌ಗೆ ತೆರಳುತಿದ್ದ ರೈಲಿಗೆ ಭಯೋತ್ಪಾದಕರು ಬಾರಿ ಗುಂಡಿನ ದಾಳಿ ನಡೆಸಿದ್ದು, ರೈಲು ಹಳಿ ತಪ್ಪಲು ಕಾರಣವಾಯಿತು. ಈ ವೇಳೆ ಭಯೋತ್ಪಾದಕರು ಮಹಿಳೆಯರು, ಮಕ್ಕಳು ಸೇರಿದಂತೆ ನೂರಾರು ಪ್ರಯಾಣಿಕರನ್ನು ತಮ್ಮ ವಶಕ್ಕೆ ಪಡೆದುಕೊಂಡರು ಎಂದಿದ್ದಾರೆ. ಬಲೋಚ್ ಲಿಬರೇಷನ್ ಆರ್ಮಿ-ಬಿಎಲ್‌ಎ ಎಂಬ ಪ್ರತ್ಯೇಕತಾವಾದಿ ಗುಂಪು ಈ ದಾಳಿಯ ಹೊಣೆ ಹೊತ್ತಿದ್ದು, ಪಾಕಿಸ್ತಾನದಿಂದ ಯಾವುದೇ ರೀತಿಯ ಮಿಲಿಟರಿ ಪ್ರತಿಕ್ರಿಯೆ ಬಂದಲ್ಲಿ ಪರಿಸ್ಥಿತಿ ಮತ್ತಷ್ಟು ಉಲ್ಬಣಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದೆ.

<><*<><>*><>

ನವದೆಹಲಿಯಲ್ಲಿಂದು ನ್ಯಾಷನಲ್ ಆರ್ಕೈವ್ಸ್ ಆಫ್ ಇಂಡಿಯಾ-ಎನ್‌ಎಐ ವತಿಯಿಂದ ಆಯೋಜಿಸಲಾಗಿದ್ದ 'ವಾಸ್ತುಶಿಲ್ಪದ ಮೂಲಕ ಭಾರತೀಯ ಪರಂಪರೆ' ಎಂಬ ವಸ್ತು ಪ್ರದರ್ಶನವನ್ನು ಕೇಂದ್ರ ಸಂಸ್ಕೃತಿ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಉದ್ಘಾಟಿಸಿದರು. ಎನ್‌ಎಐ ನ ೧೩೫ನೇ ಸಂಸ್ಥಾಪನಾ ದಿನದ ಅಂಗವಾಗಿ ಈ ವಸ್ತುಪ್ರದರ್ಶನವನ್ನು ಆಯೋಜಿಸಲಾಗಿತ್ತು. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಗಜೇಂದ್ರ ಸಿಂಗ್ ಶೇಖಾವತ್, ಎನ್‌ಎಐ ಪ್ರಸ್ತುತ ವಿಶ್ವದ ಅತಿ ದೊಡ್ಡ

ಡಿಜಿಟಲೀಕರಣ ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಒಂದು ತಿಂಗಳಲ್ಲಿ ಆರು ಲಕ್ಷಕ್ಕೂ ಹೆಚ್ಚು ಪುಟಗಳನ್ನು ಮತ್ತು ಪ್ರತಿದಿನ ಲಕ್ಷಾಂತರ ಪುಟಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸುತ್ತಿದೆ. ಈ ಕಾರ್ಯಕ್ರಮದ ಯಶಸ್ಸು 'ಜ್ಞಾನ ಭಾರತಂ' ಯೋಜನೆಗೆ ನಾಂದಿ ಹಾಡಿದೆ ಎಂದರು.

ಧ್ವನಿ: ಗಜೇಂದ್ರ ಸಿಂಗ್ ಶೇಖಾವತ್ ( ೩೦ ಸೆಕೆಂಡ್‌ಗಳು)

<><*<><>*><>

ನವದೆಹಲಿಯ ಜವಹರ್‌ಲಾಲ್ ಕ್ರೀಡಾಂಗಣದಲ್ಲಿಂದು ಭಾರತದ ಮೊಟ್ಟಮೊದಲ ವಿಶ್ವ ಪ್ಯಾರ ಅಥ್ಲೆಟಿಕ್ ಗ್ರ್ಯಾಂಡ್‌ಪ್ರಿಕ್ಸ್‌ಗೆ ಚಾಲನೆ ದೊರೆತಿದೆ. ಮೂರು ದಿನಗಳ ಈ ಕ್ರೀಡಾಕೂಟ ೯೦ ಕ್ಕೂ ಹೆಚ್ಚು ಸ್ಪರ್ಧೆಗಳನ್ನೊಳಗೊಂಡಿದ್ದು, ಜಗತ್ತಿನ ಅಗ್ರ ಪ್ಯಾರಾ ಅಥ್ಲೀಟ್‌ಗಳನ್ನು ಒಟ್ಟುಗೂಡಿಸಲಿದೆ. ಭಾರತ ಈ ಕ್ರೀಡಾಕೂಟಕ್ಕಾಗಿ ೧೪೫ ಕ್ರೀಡಾಪಟುಗಳ ತಂಡವನ್ನು ಕಣಕ್ಕಿಳಿಸಿದೆ. ಭಾರತ ತಂಡದಲ್ಲಿ ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತರಾದ ಪ್ರವೀಣ್, ನವದೀಪ್, ಧರಮ್‌ಬೀರ್ ಸೇರಿದ್ದಾರೆ. ಇದೇ ೧೩ರವರೆಗೆ ನಡೆಯಲಿರುವ ಕ್ರೀಡಾಕೂಟ ೧೯ ದೇಶಗಳ ೧೦೫ ಪ್ಯಾರಾ ಅಥ್ಲೀಟಿಕ್‌ಗಳ ಭಾಗವಹಿಸುವಿಕೆಗೆ ಸಾಕ್ಷಿಯಾಗಿದೆ.

<><*<><>*><>

ಮುಂಬೈ ಬ್ರಬಾರ್ನ್‌ನ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್-ಡಬ್ಲ್ಯುಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯಾವಳಿಯ ಗುಂಪು ಹಂತದ ಕೊನೆಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು ಮುಖಾಮುಖಿಯಾಗಿವೆ. ಟಾಸ್ ಗೆದ್ದ ಮುಂಬೈ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>